# ನೀವು ನೋಡದ ಅರಮನೆ!

■ ಚಿತ್ರಗಳು: ವಿಶ್ವನಾಥ ಸುವರ್ಣ





ದಸರಾ ಸಂಭ್ರಮದ ಈ ಹೊತ್ತಲ್ಲಿ ಕ್ಯಾಮೆರಾ ಕಣ್ತುಂಬಿಕೊಂಡ ನೀವು ನೋಡಿಲ್ಲದ ಅರಮನೆಯ ಹೊಸ ಮುಖಗಳೆಲ್ಲ ಇಲ್ಲಿವೆ..



ದಸರಾ ಬಂತೆಂದರೆ, ಮೈಸೂರು ಬೆಳಗುತ್ತದೆ. ದಸರಾ ಇಲ್ಲದ ಮೈಸೂರನ್ನು ಕಲ್ಪಿಸಿಕೊಳ್ಳುವುದು ಕಷ್ಟ; ಹಾಗೆಯೇ ಅರಮನೆಯಿಲ್ಲದ ದಸರಾವನ್ನೂ! ಅರಮನೆ, ದಸರಾ ಮತ್ತು ಮೈಸೂರು ನಡುವಣ ಸಂಬಂಧ ಅನನ್ಯ, ಅವಿನಾಭಾವದ್ದು.

ತೊಂಬತ್ತೇಳು ಸಾವಿರ ವಿದ್ಯುತ್ ಬಲ್ಬುಗಳ ಬೆಳಕಿನಲ್ಲಿ ಮೈಸೂರಿನ ಅಂಬಾ ವಿಲಾಸ ಅರಮನೆ ಒಮ್ಮೆಲೆ ಜಳಕ ಮಾಡುವಾಗ ಎದುರಿಗೆ ನಿಂತಿರುವವರ ಮೈಯಲ್ಲಿ ಅಪೂರ್ವ ಪುಳಕ. ಆದರೆ ಅರಮನೆಯನ್ನು ಎದುರು ನಿಂತು ನೋಡಿದವರೇ ಹೆಚ್ಚು. ಅರಮನೆಯ ಮೇಲೆ ಹತ್ತಿ, ಅಲ್ಲಿಂದ ಇಲ್ಲಿಂದ ನೋಡಿದರೆ ಕ್ಯಾಮೆರಾ ಕಣ್ಣಿಗೆ ಸಿಗುವ ದೃಶ್ಯಕೋನಗಳೇ ಬೇರೆ! ಅದು ನೀವು ನೋಡಿಲ್ಲದ ಅರಮನೆ.

ಈಗ ಇರುವುದು ಮೈಸೂರಿನ ನಾಲ್ಕನೇ ಅರಮನೆ. ಅದೇ ಜಾಗದಲ್ಲಿ ಮೂರು ಅರಮನೆಗಳು ನೆಲಸಮವಾಗಿವೆ. ಇಂಗ್ಲೆಂಡಿನ ವಾಸ್ತುಶಿಲ್ಪಿ ಹೆನ್ರಿ ಇರ್ವಿನ್ ವಿನ್ಯಾಸಗೊಳಿಸಿದ ಈ ಅರಮನೆ 1912ರಲ್ಲಿ ಕೇವಲ ಸುಮಾರು 41 ಲಕ್ಷ ರೂಪಾಯಿ ವೆಚ್ಚದಲ್ಲಿ ನಿರ್ಮಿತವಾಗಿತ್ತು! ದ್ರಾವಿಡಿಯನ್, ಇಂಡೊ–ಸೆರ್ರಾಸಿನಿಕ್, ರೋಮನ್ ಶೈಲಿಯನ್ನು ಬೆರೆಸಿದಂಥ ವಿನ್ಯಾಸ. ಮೂರು ಅಂತಸ್ತಿನ ಅರಮನೆಯ ಒಟ್ಟು ಎತ್ತರ 145 ಅಡಿ. ಗೋಪುರಗಳಿಗೆ ಚಿನ್ನದ ಲೇಪ ಇರುವುದರಿಂದ ಅವು ದೀಪದ ಬೆಳಕಿನಲ್ಲಿ ಹೆಚ್ಚು ಹೊಳೆಯುತ್ತವೆ.

(8ನೇ ಪುಟ ನೋಡಿ)